# ಪ್ರೈಡ್ (ಹೆಮ್ಮೆಯ) ತಿಂಗಳು

# (Pride Month)

INSTAKAS



## ಇದೀಗ ಸುದ್ದಿಯಲ್ಲಿ:

ಜೂನ್ ತಿಂಗಳನ್ನು ಜಾಗತಿಕವಾಗಿ 'ಪ್ರೈಡ್/ ಹೆಮ್ಮೆಯ ತಿಂಗಳು' (Pride Month) ಎಂದು ಆಚರಿಸಲಾಗುತ್ತದೆ. LGBTQ+ ಸಮುದಾಯವನ್ನು ಗೌರವಿಸಲು ಹಾಗೂ ಸಮಾನತೆ, ಒಳಗೊಳ್ಳುವಿಕೆ ಮತ್ತು ಮಾನವ ಹಕ್ಕುಗಳ ಸಮಸ್ಯೆಗಳ ಬಗ್ಗೆ ಜಾಗೃತಿ ಮೂಡಿಸಲು ಈ ಆಚರಣೆಯನ್ನು ಮಾಡಲಾಗುತ್ತದೆ.

LGBTQ+

## LGBTQ+ ಸಮುದಾಯದ ಬಗ್ಗೆ

- LGBTQ+ ಎಂಬುದು ಮಹಿಳಾ ಸಲಿಂಗಕಾಮಿ (Lesbian), ಪುರುಷ ಸಲಿಂಗಕಾಮಿ (Gay), ದ್ವಿಲಿಂಗಿ (Bisexual), ತೃತೀಯಲಿಂಗಿ (Transgender) ಮತ್ತು ವಿಶಿಷ್ಟ ಲೈಂಗಿಕ ಅಸ್ಮಿತೆ ಹೊಂದಿರುವ (Queer) ವ್ಯಕ್ತಿಗಳನ್ನು ಒಳಗೊಂಡಿರುವ ಒಂದು ಸಮಗ್ರ ಹಾಗೂ ಅಧಿಕೃತ ಪದವಾಗಿದೆ.



- ಗಮನಾರ್ಹವಾಗಿ, LGBTQ+ ವ್ಯಕ್ತಿಗಳು ಸಾಂಪ್ರದಾಯಿಕ ಲಿಂಗ ಪಾತ್ರಗಳು ಮತ್ತು ನಿರೀಕ್ಷೆಗಳಿಗೆ ಅನುಗುಣವಾಗಿ ವರ್ತಿಸುವುದಿಲ್ಲ. ಅವರು ವಿಶಿಷ್ಟವಾದ ಪುರುಷ ಅಥವಾ ಮಹಿಳೆ ಎಂಬ ದ್ವಂದ್ವಕ್ಕೆ ಹೊಂದಿಕೊಳ್ಳದ ಲೈಂಗಿಕ ಗುಣಲಕ್ಷಣಗಳನ್ನು ಪ್ರದರ್ಶಿಸುತ್ತಾರೆ ಮತ್ತು ಅವರ ಲಿಂಗ ಅಸ್ಮಿತೆಗಳು ಹುಟ್ಟಿನಲ್ಲಿ ಅವರಿಗೆ ನಿಗದಿಪಡಿಸಿದ ಲಿಂಗಕ್ಕಿಂತ ಭಿನ್ನವಾಗಿರುತ್ತವೆ.





- ಈ ಸಂಕ್ಷಿಪ್ತ ರೂಪದಲ್ಲಿರುವ '+' (ಪ್ಲಸ್) ಚಿಹ್ನೆಯು, ಮೇಲಿನ ಪ್ರಮುಖ ವರ್ಗಗಳಲ್ಲಿ ನಿರ್ದಿಷ್ಟವಾಗಿ ಸೇರ್ಪಡೆಯಾಗದ ಇತರ ಎಲ್ಲ ಲೈಂಗಿಕ ಅಸ್ಮಿತೆಗಳನ್ನು (Sexual Identities) ಹಾಗೂ ಒಲವುಗಳನ್ನು ಪ್ರತಿನಿಧಿಸುತ್ತದೆ.

- ಪ್ರೈಡ್ ತಿಂಗಳು: ಇದು LGBTQ+ ಹಕ್ಕುಗಳಿಗಾಗಿ ನಡೆದ ಹೋರಾಟವನ್ನು ಸ್ಮರಿಸುತ್ತದೆ ಮತ್ತು ಸಮಾಜದಲ್ಲಿ ವೈವಿಧ್ಯತೆ ಹಾಗೂ ಒಳಗೊಳ್ಳುವಿಕೆಯನ್ನು ಆಚರಿಸುತ್ತದೆ.



## LGBTQ+ ಹಕ್ಕುಗಳ ಕುರಿತು ಭಾರತದ ನಿಲುವು

- 2011ರ ಜನಗಣತಿಯ ಪ್ರಕಾರ, ಭಾರತದಲ್ಲಿ 4.87 ಲಕ್ಷ ವ್ಯಕ್ತಿಗಳು ಲಿಂಗ ವರ್ಗದಲ್ಲಿ "ಇತರೆ" (other) ಎಂಬ ಆಯ್ಕೆಯನ್ನು ಆರಿಸಿಕೊಂಡಿದ್ದಾರೆ.
- ಲಿಂಗತ್ವ ಅಲ್ಪಸಂಖ್ಯಾತರ ಹಕ್ಕುಗಳು : ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರ (NALSA) vs ಭಾರತ ಒಕ್ಕೂಟ ಪ್ರಕರಣದ (2014) ತೀರ್ಪು, ವ್ಯಕ್ತಿಯು ತನ್ನ ಲಿಂಗವನ್ನು ತಾನೇ ಗುರುತಿಸಿಕೊಳ್ಳುವ ಹಕ್ಕನ್ನು ಮಾನ್ಯ ಮಾಡಿದೆ. ಇದು ಲಿಂಗಪರಿವರ್ತಿತರನ್ನು "ಮೂರನೇ ಲಿಂಗ" (Third gender) ಎಂದು ಗುರುತಿಸುತ್ತದೆ ಮತ್ತು ಅವರ ಮೂಲಭೂತ ಹಕ್ಕುಗಳನ್ನು ಎತ್ತಿಹಿಡಿಯುತ್ತದೆ.
- ಕಾನೂನು: ಲಿಂಗತ್ವ ಅಲ್ಪಸಂಖ್ಯಾತರ (ಹಕ್ಕುಗಳ ರಕ್ಷಣೆ) ಕಾಯ್ದೆ, 2019 ಅವರ ಅಸ್ಮಿತೆಗೆ ಕಾನೂನುಬದ್ಧ ಮಾನ್ಯತೆಯನ್ನು ಒದಗಿಸುತ್ತದೆ.
- ಅಪರಾಧೀಕರಣ ರದ್ದತಿ (Decriminalisation): ನವತೇಜ್ ಸಿಂಗ್ ಜೋಹರ್ vs ಭಾರತ ಒಕ್ಕೂಟ ಪ್ರಕರಣದ (2018) ತೀರ್ಪು, ಪರಸ್ಪರ ಸಮ್ಮತಿಯ ಸಲಿಂಗಕಾಮ ಕ್ರಿಯೆಗಳನ್ನು ಅಪರಾಧ ಮುಕ್ತಗೊಳಿಸಿದೆ (ಇದರ ಮೂಲಕ ಭಾರತೀಯ ದಂಡ ಸಂಹಿತೆಯ ಸೆಕ್ಷನ್ 377 ಅನ್ನು ಭಾಗಶಃ ರದ್ದುಗೊಳಿಸಲಾಗಿದೆ).
- ಸಾಂವಿಧಾನಿಕ ನಿಬಂಧನೆಗಳು: ಸಂವಿಧಾನದ 14ನೇ ವಿಧಿಯು ಸಮಾನತೆಯ ಹಕ್ಕನ್ನು ಒದಗಿಸುತ್ತದೆ, 15ನೇ ವಿಧಿಯು ಲಿಂಗದ ಆಧಾರದ ಮೇಲಿನ ತಾರತಮ್ಯವನ್ನು ನಿಷೇಧಿಸತ್ತದೆ ಮತ್ತು 21ನೇ ವಿಧಿಯು ಜೀವಿಸುವ ಹಕ್ಕು ಹಾಗೂ ವೈಯಕ್ತಿಕ ಸ್ವಾತಂತ್ರ್ಯವನ್ನು ಖಾತರಿಪಡಿಸುತ್ತದೆ.